2016 ಕ.ತೀ.ವ 1483

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್

## ಶ್ರೀ ಗೋವರ್ಧನ ಮತ್ತು ಮತ್ತೊಬ್ಬರು –ವಿರುದ್ಧ– ಅಪ್ಪಿ ಮತ್ತು ಇತರರು*

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ಲೋಕ್‌ಅದಾಲತ್ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ದಾವೆಯೊಂದರ ಮೇಲೆ ಹೊರಡಿಸಿದ ಐತೀರ್ಪು/ ಡಿಕ್ರಿಯನ್ನು ಬದಿಗಿರಿಸುವಂತೆ ಕೋರಿ ದಾವಾದಾರರಿಂದ ಸದರಿ ರಿಟ್ ಅರ್ಜಿ.**

**ಸದರಿ ಪ್ರಕರಣದಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು 6, 7(ಎ) ಮತ್ತು (ಬಿ) ಲೋಕ್ ಅದಾಲತ್‌ನಲ್ಲಿ ರಾಜೀ ಸಂಧಾನ ಪತ್ರಕ್ಕೆ ಸಹಿ ಹಾಕದ ಕಾರಣ ಅಂತಹ ಸಂಧಾನವನ್ನು ಪುರಸ್ಕರಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.**

ಅರ್ಜಿದಾರರ ಪರ: ಶ್ರೀ ಕೆ.ಎ. ಅರಿಗ, ವಕೀಲರು.
6ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಸ್.ಬಿ. ತೋಟದ್, ವಕೀಲರು.
2ನೇ 4 ಮತ್ತು 5ನೇ ಪ್ರತ್ಯರ್ಜಿದಾರರ ಪರ: ಶ್ರೀ ಸಂದೀಶ್ ಟಿ.ಬಿ. ವಕೀಲರು

### ಆಜ್ಞೆ

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್:**

ವಾದಿಗಳು, ಅನುಬಂಧ–ಎ ಯಂತೆ ಈ ಪ್ರಕರಣದಲ್ಲಿ ಹಾಜರುಪಡಿಸಿದಂಥ ಲೋಕ್ ಅದಾಲತ್ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಉಡುಪಿ

*ರಿಟ್ ಅರ್ಜಿ ಸಂಖ್ಯೆ: 23235/2012 (ಜಿಎಂ–ಸಿಪಿಸಿ), ದಿನಾಂಕ: 28ನೇ ಏಪ್ರಿಲ್, 2015.

ಜಿಲ್ಲೆ, ಉಡುಪಿ ಇವರಿಂದ ಒ.ಎಸ್.ಸಂ.54/2004ರಲ್ಲಿ ಹೊರಡಿಸಿದ 07.04.2007ನೇ ದಿನಾಂಕದ ಐತೀರ್ಪು/ಡಿಕ್ರಿಯನ್ನು ರದ್ದುಪಡಿಸಲು ಕೋರಿ ಈ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ವಾದಿಗಳಾದ ಗೋವರ್ಧನ ಮತ್ತು ಶ್ರೀನಿವಾಸರವರುಗಳು, ವಾದಪತ್ರದ 'ಎ'ನಲ್ಲಿನ ಅನುಸೂಚಿತ ಸ್ವತ್ತುಗಳ ಸಂಬಂಧದಲ್ಲಿ ಜಾರಿಗೊಳಿಸಿರುವ ಪಾಲು ಪತ್ರವನ್ನು ರದ್ದುಪಡಿಸಿ, ನ್ಯಾಯಯುತವಾಗಿ ಮತ್ತು ಸಮಪ್ರಮಾಣದಲ್ಲಿ, ಅನುಸೂಚಿತ ಸ್ವತ್ತುಗಳ 'ಎ' ವಾದ ಪತ್ರವನ್ನು ಪಾಲು ಮಾಡುವ ಮತ್ತು ಪ್ರತ್ಯೇಕಗೊಳಿಸುವ ಅಧಿಭೋಗಕ್ಕೆ ಸಂಬಂಧಿಸಿದಂತೆ ಒ.ಎಸ್.ಸಂಖ್ಯೆ 54/2004ನ್ನು ಸಲ್ಲಿಸಿರುತ್ತಾರೆ. ಅವರು ದಾವೆಯನ್ನು ವಜಾ ಮಾಡಲು ಕೋರಿರುತ್ತಾರೆ. ವಿವಾದಾಂಶಗಳನ್ನು ರೂಪಿಸಲಾಗಿರುತ್ತದೆ. ಅಧಿವಿಚಾರಣೆಗೆ ಮೊಕದ್ದಮೆಯನ್ನು ನಿಯೋಜಿಸಲಾಗಿರುತ್ತದೆ. ಆ ಹಂತದಲ್ಲಿ, ಪಕ್ಷಕಾರರು ಮಾಡಿಕೊಂಡ ಕೋರಿಕೆಯ ಮೇಲೆ ದಾವೆಯನ್ನು ಲೋಕ್ ಅದಾಲತ್‌ಗೆ ಉಲ್ಲೇಖಿಸಲಾಗಿರುತ್ತದೆ. ಲೋಕ ಅದಾಲತ್‌ನಲ್ಲಿ 7.04.2007ರಂದು ರಾಜಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ಆ ತರುವಾಯ, ಮೊದಲ ವಾದಿಯು, ಸದರಿ ಡಿಕ್ರಿಯನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಎದುರು ಸಂಕೀರ್ಣ ಮೇಲ್ಮನವಿಯನ್ನು ಮೊದಲ ವಾದಿಯು ಸಲ್ಲಿಸಿರುತ್ತಾನೆ. ಸೂಕ್ತ ವೇದಿಕೆಯ ಎದುರು ಲೋಕ್ ಅದಾಲತ್ ಮೂಲಕ ಐತೀರ್ಪನ್ನು ಪಾಸು ಮಾಡಿ ಪ್ರಶ್ನಿಸಲು ವಾದಿಗಳಿಗೆ ಸ್ವಾತಂತ್ರ್ಯವನ್ನು ಮೀಸಲಿರಿಸಿ, ಇದು ಊರ್ಜಿತವಲ್ಲವೆಂಬ ಆಧಾರದ ಮೇಲೆ ಸದರಿ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ. 18.01.2012ರಂದು ಸದರಿ ಆದೇಶವನ್ನು ಹೊರಡಿಸಿದ ತರುವಾಯ, ಪ್ರಸ್ತುತ ರಿಟ್ ಅರ್ಜಿಯನ್ನು, ಲೋಕ ಅದಾಲತ್ ಹೊರಡಿಸಿದ ಐತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾಗಿರುತ್ತದೆ.

3. ಅರ್ಜಿದಾರರು/ವಾದಿಗಳ ಪರ ಮಾನ್ಯ ವಕೀಲರು, ವಾದಿಗಳು ರಾಜಿಯಾಗಲು ಅವರು ತಮ್ಮ ಸಹಿಯನ್ನು ಮಾಡಿಲ್ಲ; ಐತೀರ್ಪು/ಡಿಕ್ರಿಯನ್ನು, ಅವರ ವಕೀಲರು ಸಹಿ ಮಾಡಿ ರಾಜಿ ಮಾಡಿಕೊಳ್ಳುವ ಆಧಾರದ ಮೇಲೆ ಹೊರಡಿಸಲಾಗಿರುತ್ತದೆಂದು

ವಾದಿಸಿರುತ್ತಾರೆ. ಇದು ಸ್ಪಷ್ಟವಾಗಿ ಕಾನೂನುಬಾಹಿರವಾಗಿರುತ್ತದೆ. ಆದ್ದರಿಂದ ಇದು ರದ್ದಪಡಿಸಲು ಅಗತ್ಯವಾಗಿರುತ್ತದೆ. ಅವರ ವಕೀಲರ ಸಹಿಯ ಆಧಾರದ ಮೇಲೆ, ರಾಜಿಯನ್ನು ದಾಖಲು ಮಾಡಲಾಗಿದೆ. ಹೊರಡಿಸಿರುವ ಐತೀರ್ಪು/ಡಿಕ್ರಿಯು ಸ್ಪಷ್ಟವಾಗಿ ಕಾನೂನು ಬಾಹಿರವಾಗಿರುತ್ತದೆ. ಆದ್ದರಿಂದ, ಪ್ರಶ್ನಿತ ಐತೀರ್ಪು ರದ್ದುಪಡಿಸಲು ತಕ್ಕುದಾಗಿದೆಯೆಂದು ನಿವೇದಿಸಿಕೊಂಡಿರುತ್ತಾರೆ.

4. ಇದಕ್ಕೆ ಪ್ರತಿಯಾಗಿ, ಪ್ರತಿವಾದಿಗಳು/ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು, ಪಕ್ಷಕಾರರು, ಕೌಟುಂಬಿಕ ವ್ಯವಸ್ಥೆಗಳ ವಿವರಣ ಪತ್ರವನ್ನು ನಮೂದಿಸಿಕೊಂಡಿರುತ್ತಾರೆ ಹಾಗೂ ಪಾಲು ಪತ್ರವನ್ನು ಅನುಷ್ಠಾನಗೊಳಿಸಿಕೊಂಡಿರುತ್ತಾರೆಂದು ನಿವೇದಿಸಿರುತ್ತಾರೆ. ತರುವಾಯ, ಪಾಲು ಪತ್ರವನ್ನು ಅನುಷ್ಠಾನಗೊಳಿಸಿರುತ್ತಾರೆ. ಪಕ್ಷಕಾರರು ಇತ್ಯರ್ಥಕ್ಕೆ ಬಂದಾಗ, ವಕೀಲರು, ವಾದಿಗಳ ಸೂಚನೆಗಳ ಮೇರೆಗೆ, ರಾಜಿ ಅರ್ಜಿಯ ಮೇಲೆ ತನ್ನ ಸಹಿಯನ್ನು ಹಾಕಿರುತ್ತಾರೆ. ಆದ್ದರಿಂದ, ಸದರಿ ರಾಜಿಯು, ವಾದಿಗಳನ್ನು ಸಂಪೂರ್ಣವಾಗಿ ಬಂಧಿಸುತ್ತದೆ. ಐತೀರ್ಪನ್ನು, ವಾದಿಗಳು ರಾಜಿ ಮಾಡಿಕೊಳ್ಳುವ ವಾದಿಗಳಲ್ಲ ಅಥವಾ ರಾಜಿ ಅರ್ಜಿಗೆ ಅವರು ಸಹಿಗಳನ್ನು ಹಾಕಿಕೊಳ್ಳುವಂತಿಲ್ಲವೆಂಬ ಆಧಾರದ ಮೇಲೆ ರದ್ದುಪಡಿಸಲಾಗುವುದಿಲ್ಲವೆಂದೂ ವಾದಿಸಿರುತ್ತಾರೆ.

5. ಮೇಲಿನದರ ಹಿನ್ನೆಲೆಯಲ್ಲಿ, ಈ ರಿಟ್ ಅರ್ಜಿಯಲ್ಲಿನ ಪರಿಗಣನೆಗೆ ಸಂಬಂಧಿಸಿದಂತೆ ಈ ಮುಂದಿನ ಅಂಶವು ಉದ್ಭವಿಸಿರುತ್ತದೆ.

> ವಿವಾದವನ್ನು, ರಾಜಿ ಮಾಡಿಕೊಳ್ಳಲು, ಪಕ್ಷಕಾರರು ಇಲ್ಲದೆಯೆ ಅಥವಾ ಅವರು ಸಹಿ ಮಾಡದೆಯೇ ಲೋಕ ಅದಾಲತ್‌ನಲ್ಲಿ ಐತೀರ್ಪು/ಡಿಕ್ರಿಯನ್ನು ಇತ್ಯರ್ಥಗೊಳಿಸಿಕೊಳ್ಳಬಹುದೆ?

6. ಕಾನೂನು ಸೇವಾ ಪ್ರಾಧಿಕಾರಗಳ ಅಧಿನಿಯಮ, 1987 (ಇನ್ನು ಮುಂದೆ ಸಂಕ್ಷಿಪ್ತವಾಗಿ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 19ನೇ ಪ್ರಕರಣದ (5)ನೇ ಉಪ–ಪ್ರಕರಣವು, ಈ ಮುಂದಿನಂತಿರುತ್ತದೆ:

ಲೋಕ್ ಅದಾಲತ್,

(i) ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣ; ಅಥವಾ

(ii) ಲೋಕ್ ಅದಾಲತ್ ಅನ್ನು ಸಂಘಟಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಬರುವಂಥ ಹಾಗೂ ಯಾವುದೇ ನ್ಯಾಯಾಲಯದ ಮುಂದೆ ತರದಂಥ ಯಾವುದೇ ವಿಷಯದ

–ಪ್ರಕರಣದಲ್ಲಿನ ವಿವಾದಕ್ಕೆ ಪಕ್ಷಕಾರರ ನಡುವೆ ರಾಜಿ ಮಾಡಿಕೊಳ್ಳುವಲ್ಲಿ ಅಥವಾ ಇತ್ಯರ್ಥಪಡಿಸಿಕೊಳ್ಳುವಲ್ಲಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮತ್ತು ಒಂದು ತೀರ್ಮಾನಕ್ಕೆ ಬರಲು ಒಂದು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

ಪರಂತು, ಲೋಕ್ ಅದಾಲತ್ತು, ಯಾವುದೇ ಕಾನೂನಿನಡಿಯಲ್ಲಿ ರಾಜೀಯಾಗದ ಅಪರಾಧಕ್ಕೆ ಸಂಬಂಧಿಸಿದ ಯಾವುದೇ ಪ್ರಕರಣ ಅಥವಾ ವಿಷಯದ ಸಂಬಂಧದಲ್ಲಿ ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

20ನೇ ಪ್ರಕರಣದ (1)ನೇ ಉಪ–ಪ್ರಕರಣವು ಲೋಕ್ ಅದಾಲತ್‌ನ ಪ್ರಕರಣಗಳಿಗೆ ಸಂಜ್ಞೇಯತೆಯ ಉಪಬಂಧಕ್ಕೆ ಅವಕಾಶ ಕಲ್ಪಿಸುತ್ತದೆ. ಅದನ್ನು ಈ ಮುಂದಿನಂತೆ ಓದಲಾಗಿದೆ:

"(i) 19ನೇ ಪ್ರಕರಣದ (5)ನೇ ಉಪ–ಪ್ರಕರಣದ (1)ನೇ ಖಂಡಕ್ಕೆ ಯಾವುದೇ ಪ್ರಕರಣವು ಉಲ್ಲೇಖಿಸಿದಲ್ಲಿ,

ಇತ್ಯರ್ಥಕ್ಕೆ ಸಂಬಂಧಿಸಿದಂತೆ ಲೋಕ್ ಅದಾಲತ್ ಪ್ರಕರಣವನ್ನು ಉಲ್ಲೇಖಿಸುವುದಕ್ಕಾಗಿ ಹಾಗೂ ಅಂಥ ಇತ್ಯರ್ಥದ ಅವಕಾಶಗಳಿವೆಯೆಂದು ಇಂಥ ನ್ಯಾಯಾಲಯಕ್ಕೆ ಮೊದಲೇ ಮನವರಿಕೆಯಾದಲ್ಲಿ,

(i) (ಎ) ಅದರ ಪಕ್ಷಕಾರರ ಒಪ್ಪಿಗೆ; ಅಥವಾ

(ಬಿ) ಅದರ ಒಬ್ಬ ಪಕ್ಷಕಾರನು, ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರೆ;

(ii)ಲೋಕ್ ಅದಾಲತ್‌ನ ಮೂಲಕ ಒಬ್ಬರನ್ನು ಸಂಜ್ಞೇಯತೆಗೆ ತೆಗೆದುಕೊಳ್ಳಬೇಕಾದುದು ಸೂಕ್ತವಾದುದೆಂಬ ವಿಷಯ ನ್ಯಾಯಾಲಯಕ್ಕೆ ಮನವರಿಕೆಯಾದಲ್ಲಿ,

– ನ್ಯಾಯಾಲಯವು ಲೋಕ್ ಅದಾಲತ್‌ಗೆ ಪ್ರಕರಣವನ್ನು ಉಲ್ಲೇಖಿಸತಕ್ಕದ್ದು:

ಪರಂತು, ಯಾವುದೇ ಪ್ರಕರಣವನ್ನು, ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ನೀಡದ ತರುವಾಯ ಅಂಥ ನ್ಯಾಯಾಲಯದಿಂದ (i)ನೇ ಖಂಡದ (ಬಿ) ಉಪಖಂಡ ಅಥವಾ (ii)ನೇ ಖಂಡದಡಿಯಲ್ಲಿ ಲೋಕ್ ಅದಾಲತ್‌ಗೆ ಉಲ್ಲೇಖಿಸತಕ್ಕದ್ದಲ್ಲ.

(2) . . . . .

(3) (1)ನೇ ಉಪ–ಪ್ರಕರಣದಡಿಯಲ್ಲಿ ಲೋಕ್ ಅದಾಲತ್‌ಗೆ ಯಾವುದೇ ಪ್ರಕರಣವನ್ನು ಉಲ್ಲೇಖಿಸಿರುವೆಡೆಗಳಲ್ಲಿ ಅಥವಾ

(2)ನೇ ಉಪ–ಪ್ರಕರಣದಡಿಯಲ್ಲಿ ಇದಕ್ಕೆ ಉಲ್ಲೇಖವನ್ನು ಮಾಡಿರುವಲ್ಲಿ, ಲೋಕ್ ಅದಾಲತ್ ಪ್ರಕರಣ ಅಥವಾ ವಿಷಯದ ವಿಲೆಗೆ ಮುಂದಾಗತಕ್ಕದ್ದು ಮತ್ತು ಪಕ್ಷಕಾರರ ನಡುವೆ ರಾಜಿ ಅಥವಾ ಇತ್ಯರ್ಥದಲ್ಲಿ ನಿರ್ಣಯ ತೆಗೆದುಕೊಳ್ಳತಕ್ಕದ್ದು.

(4) ಪ್ರತೀ ಲೋಕ್ ಅದಾಲತ್, ಈ ಅಧಿನಿಯಮದಡಿಯಲ್ಲಿ ಇದರ ಮುಂದಿರುವ ಯಾವುದೇ ಉಲ್ಲೇಖವನ್ನು ನಿರ್ಧರಿಸುವಾಗ, ಪಕ್ಷಕಾರರ ನಡುವೆ ರಾಜಿ ಅಥವಾ ಇತ್ಯರ್ಥಕ್ಕೆ ಬರಲು ಗರಿಷ್ಠ ತ್ವರಿತತೆಯೊಂದಿಗೆ ಕಾರ್ಯ ನಿರ್ವಹಿಸತಕ್ಕದ್ದು.

7. ಮೇಲೆ ಹೇಳಿದ ಉಪಬಂಧಗಳಿಂದ, ಪಕ್ಷಕಾರರ ನಡುವಿನ ರಾಜಿ ಅಥವಾ ಇತ್ಯರ್ಥವು, ಪಕ್ಷಕಾರರ ನಡುವಿನ ವಿವಾದವನ್ನು ಇತ್ಯರ್ಥಪಡಿಸಲು ಲೋಕ್ ಅದಾಲತ್‌ಗೆ ಅವಶ್ಯಕವಾಗಿರುತ್ತದೆಂಬುದು ಸ್ಪಷ್ಟವಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಲೋಕ್ ಅದಾಲತ್‌ಗೆ ಯಾವುದೇ ನ್ಯಾಯ ನಿರ್ಣಯ ಪ್ರಕಾರ್ಯವನ್ನು ಹೊಂದಿರುವುದಿಲ್ಲ. ದಾವೆಯ ಪಕ್ಷಕಾರರು, ವಿವಾದವನ್ನು ರಾಜಿ ಮಾಡಿಕೊಳ್ಳಲು ಅಥವಾ ಇತ್ಯರ್ಥಪಡಿಸಿಕೊಳ್ಳಲು ಮಾತ್ರ, ಲೋಕ್ ಅದಾಲತ್‌ಗೆ ಪ್ರಕರಣ ಅಥವಾ ವಿಷಯವನ್ನು ಉಲ್ಲೇಖಿಸಿ, ರಾಜಿ ಅಥವಾ ಇತ್ಯರ್ಥದಂಥ ನಿಬಂಧನೆಗಳಿಗನುಸಾರವಾಗಿ ವಿಲೆ ಮಾಡಬಹುದು. ದಾವೆಯ ಪಕ್ಷಕಾರರು ಲೋಕ್‌ಅದಾಲತ್ ಎದುರು ಹಾಜರಾಗಿ, ರಾಜಿ ಅಥವಾ ಇತ್ಯರ್ಥಕ್ಕೆ ಒಪ್ಪಿಕೊಳ್ಳಬೇಕೆಂಬುದು ಪೂರ್ವಭಾವನೆಯಾಗಿರುತ್ತದೆ. ಇದು ನ್ಯಾಯಾಲಯದ ಎದುರಿನ ವ್ಯವಹರಣೆಯಾಗಿರುವುದಿಲ್ಲ.

8. ಅಧಿನಿಯಮ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿಯಲ್ಲಿ, ಪರಿಭಾಷಿಸಲಾದಂತೆ ಲೋಕ್ ಅದಾಲತ್ ಒಂದು ನ್ಯಾಯಾಲಯವಾಗಿರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ IIIನೇ ಕ್ರಮಾದೇಶವು ನ್ಯಾಯಾಲಯದ ಮುಂದಿನ ಕಾರ್ಯ ವಿಧಾನದಲ್ಲಿ ಭಾಗವಹಿಸಲು ಮಾನ್ಯತೆ ಪಡೆದ ಏಜೆಂಟ್ ಅಥವಾ ಪ್ಲೀಡರನ್ನು ಮಾತ್ರ ಅಧಿಕೃತಗೊಳಿಸಿರುತ್ತದೆ. ಆದ್ದರಿಂದ, ಲೋಕ್ ಅದಾಲತ್‌ನಲ್ಲಿ

ಪಕ್ಷಕಾರರ ನಡುವೆ ರಾಜಿ ಅಥವಾ ಇತ್ಯರ್ಥಗಳು ನಡೆಯುತ್ತವೆ. ಪಕ್ಷಕಾರರು, ನ್ಯಾಯಾಲಯದ ಎದುರು ಹಾಜರಾಗಲು ನ್ಯಾಯವಾದಿಗಳನ್ನು ನಿಯೋಜಿಸಿದ್ದಲ್ಲಿ, ತರುವಾಯ, ಖಂಡಿತವಾಗಿ, ನ್ಯಾಯವಾದಿಯು ರಾಜಿ ಮಾಡಿಸಲು ಮತ್ತು ಇತ್ಯರ್ಥಗೊಳಿಸಿಕೊಳ್ಳಲು ನೆರವು ನೀಡಬಹುದು. ಒಮ್ಮೆ, ಇತ್ಯರ್ಥದ ರಾಜಿಯನ್ನು ಲಿಖಿತ ರೂಪಕ್ಕೆ ತಂದ ತರುವಾಯ, ದಾವೆ ಹೂಡಿರುವ ಪಕ್ಷಕಾರರಿಗೆ ಸಂಬಂಧಿಸಿದಂತೆ, ರಾಜಿ ಅಥವಾ ಇತ್ಯರ್ಥದ ನಿಬಂಧನೆಗಳಿಗೆ ಅವರ ಒಪ್ಪಿಗೆಯನ್ನು ತೆಗೆದುಕೊಂಡಿರುವುದನ್ನು ಅವರ ಸಹಿಗಳ ಮೂಲಕ ದೃಢಪಡಿಸಿಕೊಳ್ಳಬೇಕಾಗುತ್ತದೆ. ಆ ತರುವಾಯ ನ್ಯಾಯವಾದಿಯೂ ತನ್ನ ಸಹಿಯನ್ನು ಮಾಡಬೇಕಾಗಿರುತ್ತದೆ. ಆದರೆ, ಪಕ್ಷಕಾರರು ರಾಜಿ ಅರ್ಜಿ ಅಥವಾ ಇತ್ಯರ್ಥಕ್ಕೆ ಅವರ ಸಹಿಗಳನ್ನು ಹಾಕದಿದ್ದಲ್ಲಿ, ನ್ಯಾಯಾಲಯದ ಎದುರು ಪಕ್ಷಕಾರರನ್ನು ಪ್ರತಿನಿಧಿಸುವ ವಕೀಲರು, ಲೋಕ ಅದಾಲತ್‌ನಲ್ಲಿ ಭಾಗವಹಿಸಿದ್ದಾಗ್ಯೂ ಹಾಗೂ ಇತ್ಯರ್ಥ ಮಾಡಿಕೊಳ್ಳುವಲ್ಲಿ ಪಕ್ಷಕಾರರಿಗೆ ನೆರವು ನೀಡಿದ್ದಾಗ್ಯೂ ತನ್ನ ಪಕ್ಷಕಾರನಿಗೆ ಬಂಧನಕಾರಿಯಾಗುವಂತೆ ರಾಜಿಯನ್ನು ಮಾಡಿಕೊಳ್ಳುವ ಅಧಿಕಾರವಿರುವುದಿಲ್ಲ. ರಾಜಿ ಅಥವಾ ಇತ್ಯರ್ಥದ ಅರ್ಜಿಗೆ ಆತನ ಸಹಿ ಇಲ್ಲದಿರುವುದು ರಾಜಿಗೆ ಪಕ್ಷಕಾರನ ಸಮ್ಮತಿ ಅಥವಾ ಒಪ್ಪಿಗೆಯನ್ನು ರುಜುವಾತುಪಡಿಸದಿದ್ದಲ್ಲಿ, ಅದು ಎದುರು ಪಕ್ಷಕಾರನೊಂದಿಗೆ ರಾಜಿ ಅಥವಾ ಇತ್ಯರ್ಥಕ್ಕೆ ಆತ ಸಿದ್ಧನಿಲ್ಲವೆಂಬುದನ್ನು ತೋರಿಸುತ್ತದೆ.

9. ಪ್ರಸ್ತುತ ಪ್ರಕರಣದಲ್ಲಿ, ಇಬ್ಬರು ವಾದಿಗಳಿದ್ದಾರೆ. ಅವರು ರಾಜಿ ಅರ್ಜಿಗೆ ಸಹಿ ಮಾಡಿರುವುದಿಲ್ಲ. ಆದರೆ ಅವರ ವಕೀಲರು ಸಹಿ ಮಾಡಿರುತ್ತಾರೆ. ಪ್ರಶ್ನಿತ ಐತೀರ್ಪು, ಪ್ರತಿವಾದಿ ಸಂ.6, 7 (ಎ) ಮತ್ತು (ಬಿ) ರವರುಗಳು ಏಕಪಕ್ಷೀಯವಾಗಿ ಅರ್ಜಿ ಸಲ್ಲಿಸಿರುವುದನ್ನು ತೋರಿಸುತ್ತದೆ. ಆದ್ದರಿಂದ, ಅವರು ರಾಜಿ ಅರ್ಜಿಗೆ ತಮ್ಮ ಸಹಿಗಳನ್ನು ಹಾಕಿರುವುದಿಲ್ಲ. ರಾಜಿ ಅರ್ಜಿಯ ಪರಿಶೀಲನೆಯು, ಇಬ್ಬರೂ ಪಕ್ಷಕಾರರು, 18.02.2002ನೇ ದಿನಾಂಕದ ಕೌಟುಂಬಿಕ ಒಪ್ಪಂದವನ್ನು ಒಪ್ಪಿಕೊಂಡಿದ್ದಾರೆಂದು 11.03.2004ನೇ ದಿನಾಂಕದ ಪಾಲಿನ ಪತ್ರವು, ರಾಜಿ ಅರ್ಜಿಯಲ್ಲಿ ರೂಪಿಸಲಾದಂತೆ ಮಾರ್ಪಾಟುಗಳಿಗೆ ಒಳಪಟ್ಟು, ಪ್ರಸ್ತುತ ದಾವೆಗೆ ಪಕ್ಷಕಾರರ ಮೇಲೆ ಬಂಧನಕಾರಿಯಾಗಿರುತ್ತದೆಂಬುದು ತಿಳಿದುಬರುತ್ತದೆ. ಅವಿಭಕ್ತ

ಕುಟುಂಬದ ಸ್ವತ್ತನ್ನು ಗಡಿಕಲ್ಲು ಮತ್ತು ಬಾಂದು ಕಲ್ಲುಗಳ ಮೂಲಕ ಭಾಗಮಾಡಿಕೊಂಡಿರುವುದನ್ನು ಚಾಲ್ತಿಯಲ್ಲಿರುವ ಕೌಟುಂಬಿಕ ಅಸ್ತಿತ್ವದಲ್ಲಿರುವ ಒಪ್ಪಂದ ಹಾಗೂ ವಿಭಾಗದ ಪತ್ರದಲ್ಲಿ ನಮೂದಿಸಿದ್ದು, ಸಾಮಾನ್ಯವಾಗಿ ಹೊಂದಾಣಿಕೆ ಮಾಡಲು, ಬೇರೆಯವರ ಹೆಸರಿನಲ್ಲಿ, ತಮಗೆ ಸಂಬಂಧಪಟ್ಟ ಭಾಗವು ಬಂದಂಥ ಅಥವಾ ಹೋಗಿರುವ ಸ್ವತ್ತುಗಳನ್ನು ಹಸ್ತಾಂತರಿಸಲು ಒಂದು ಪ್ರಯತ್ನವನ್ನು ಮಾಡಲಾಗಿರುವುದು ರಾಜಿ ಸಂಧಾನದಿಂದ ಕಾಣಬಹುದಾಗಿರುತ್ತದೆ. ವಾದಿಗಳು ಸದರಿ ರಾಜಿ ಸಂದಾನವನ್ನು ಒಪ್ಪಿಕೊಂಡಿರುವುದಿಲ್ಲವೆಂಬುದು, ರಾಜಿ ಪತ್ರದಲ್ಲಿ ಅವರುಗಳು ಸಹಿ ಮಾಡದಿರುವುದರಿಂದ ಸ್ಪಷ್ಟವಾಗಿರುತ್ತದೆ. ಲೋಕ್ ಅದಾಲತ್‌ಗೆ ವಿಷಯವನ್ನು ಉಲ್ಲೇಖಿಸಿರುವ ಹಾಗೂ ಲೋಕ್ ಅದಾಲತ್ ನಡೆಸುವ ಈ ಉದ್ದೇಶ ವಿಫಲವಾಗಿದೆಯೆಂಬುದನ್ನು ಇದು ತೋರಿಸುತ್ತದೆ. ಲೋಕ ಅದಾಲತ್‌ನಲ್ಲಿ, ಪಕ್ಷಕಾರರು ಮುಖಾ ಮುಖಿಯಾಗಿ ಕುಳಿತುಕೊಂಡು, ವಕೀಲರ ಹಾಗೂ ಲೋಕ್ ಅದಾಲತ್‌ನ ಸದಸ್ಯರ ನೆರವಿನೊಂದಿಗೆ ವಿವಾದವನ್ನು ಬಗೆಹರಿಸಿಕೊಳ್ಳಬಹುದಾಗಿರುತ್ತದೆ. ಪಕ್ಷಕಾರರು ಒಂದಾಗದೇ ಪಕ್ಷಕಾರರ ಪರ ವಕೀಲರು, ಅವರುಗಳನ್ನು ರಾಜಿ ಮಾಡಿಕೊಳ್ಳಲು ಒತ್ತಾಯಿಸುವಂತಿಲ್ಲ ಹಾಗೂ ಅಂಥ ರಾಜಿಯನ್ನು ಲೋಕ್ ಅದಾಲತ್ ಒಪ್ಪಿಕೊಳ್ಳುವಂತಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಲೋಕ್ ಅದಾಲತ್ ಒಪ್ಪಿಕೊಂಡು ಮಾಡಿಸಿರುವಂಥ ರಾಜಿಯ ರೀತಿಯು, ರಾಜಿ ಅರ್ಜಿಗೆ ಸಹಿ ಮಾಡಿರುವಂಥ ಲೋಕ ಅದಾಲತ್‌ನ ಸದಸ್ಯರು ಹಾಗೂ ವಕೀಲರ ಪರಿಷತ್ತಿನ ಮಾನ್ಯ ಸದಸ್ಯರುಗಳು ತಮ್ಮ ಮನಸ್ಸನ್ನು ಸದರಿ ಅರ್ಜಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಒಬ್ಬ ವ್ಯಕ್ತಿ ತನಗೆ ಅನ್ಯಾಯವಾಗಿದೆಯೆಂದು ಪರಿಹಾರ ಕೋರಿ ನ್ಯಾಯಾಲಯಕ್ಕೆ ಬಂದಾಗ, ಆ ವಿಷಯವನ್ನು ಲೋಕ್ ಅದಾಲತ್‌ಗೆ ಉಲ್ಲೇಖಿಸಿ, ಆ ಪಕ್ಷಕಾರನ ಗೈರು ಹಾಜರಿಯಲ್ಲಿ ರಾಜಿ ಅಥವಾ ಇತ್ಯರ್ಥದ ದಾವೆಯನ್ನು ಒಪ್ಪಿಕೊಳ್ಳುವುದರಿಂದ ನ್ಯಾಯದ ಬಾಗಿಲನ್ನು ಆತನಿಗೆ ಮುಚ್ಚಿದಂತೆಯೇ ಆಗುತ್ತದೆ.

10. ಪ್ರಕರಣಗಳು ತ್ವರಿತವಾಗಿ ನಿರ್ಧಾರವಾಗಿಬಿಡಬೇಕು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಲೋಕ್ ಅದಾಲತ್ ಪ್ರಕರಣದ ತ್ವರಿತ ವಿಲೆಗೆ ಸಂಬಂಧಿಸಿದಂತೆ ಒಪ್ಪಿಕೊಂಡಂಥ ಪರ್ಯಾಯವಾಗಿ ವಿವಾದಗಳನ್ನು ಇತ್ಯರ್ಥಪಡಿಸುವಂಥ

ಕಾರ್ಯತಂತ್ರವೇ ಆಗಿದೆ. ಆದರೆ, ತ್ವರಿತವಾಗಿ ವಿಲೆ ಮಾಡಬೇಕೆಂಬ ಉದ್ವೇಗ, ನ್ಯಾಯದ ಹಿತಾಸಕ್ತಿಯನ್ನು ತ್ಯಾಗ ಮಾಡಬಹುದಾದದ್ದು ಆಗಬಾರದಾಗಿರುತ್ತದೆ. ಪಕ್ಷಕಾರರಿಗೆ ಇತ್ಯರ್ಥ ಅಥವಾ ರಾಜಿಯ ಮೂಲಕ ನ್ಯಾಯವನ್ನು ಒದಗಿಸಿಕೊಡಬೇಕಾಗಿರುತ್ತದೆ. ಪಕ್ಷಕಾರರು ರಾಜಿ ಅಥವಾ ಇತ್ಯರ್ಥವನ್ನು ಒಪ್ಪಿಕೊಳ್ಳದಿದ್ದಲ್ಲಿ, 20ನೇ ಪ್ರಕರಣದ (6) ಮತ್ತು (7)ನೇ ಉಪ ಪ್ರಕರಣಗಳು, ನ್ಯಾಯಾಲಯದಲ್ಲಿ ಪರಿಹಾರ ಕೋರಲು ಮತ್ತು ಲೋಕ್‌ಅದಾಲತ್‌ಗೆ ವಿಷಯವನ್ನು ಉಲ್ಲೇಖಿಸಿದಂಥ ನ್ಯಾಯಾಲಯಕ್ಕೆ ಪ್ರಕರಣದ ದಾಖಲೆಯನ್ನು ಹಿಂದಿರುಗಿಸಲು ಪಕ್ಷಕಾರರಿಗೆ ಲೋಕ ಅದಾಲತ್ ಮಾರ್ಗದರ್ಶನ ನೀಡತಕ್ಕದ್ದಾಗಿರುತ್ತದೆ. ತರುವಾಯ, ನ್ಯಾಯಾಲಯವು, ಅಧಿನಿಯಮದ 20ನೇ ಪ್ರಕರಣದ (1)ನೇ ಉಪ – ಪ್ರಕರಣದಡಿಯಲ್ಲಿ, ಅದು ಉಲ್ಲೇಖಿಸಿದಂಥ ಹಂತದಿಂದ ಅಂಥ ಪ್ರಕರಣದೊಂದಿಗೆ ವ್ಯವಹರಿಸಲು ಮುಂದುವರೆಯತಕ್ಕದ್ದಾಗಿರುತ್ತದೆ. ಇದು ಕಾನೂನಿನಲ್ಲಿ ಆಜ್ಞಾಪಕವಾಗಿರುತ್ತದೆ.

11. ವಿಷಯದ ಈ ಹಿನ್ನೆಲೆಯಲ್ಲಿ, ಲೋಕ ಅದಾಲತ್ ಹೊರಡಿಸಿದ ಆದೇಶವು ಊರ್ಜಿತವಾಗಿರುವುದಿಲ್ಲ. ಹಾಗಾಗಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತೇನೆ.

## ಆಜ್ಞೆ

ರಿಟ್ ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ. ಲೋಕ್ ಅದಾಲತ್ ಹೊರಡಿಸಿರುವ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಪಡಿಸಲಾಗಿರುತ್ತದೆ. ಮೂಲ ದಾವೆಯನ್ನು ಅದರ ಕಡತದಲ್ಲಿಯೇ ಇಡಲಾಗಿರುತ್ತದೆ. ಇಬ್ಬರೂ ಪಕ್ಷಕಾರರಿಗೂ ಅವಕಾಶವನ್ನು ನೀಡಿದ ತರುವಾಯ, ಲೋಕ್ ಅದಾಲತ್‌ಗೆ ಉಲ್ಲೇಖಿಸಿದ ಸಮಯದಲ್ಲಿ ಆ ಪ್ರಕರಣ ಯಾವ ಹಂತದಲ್ಲಿತ್ತೋ ಆ ಹಂತದಿಂದ, ದಾವೆಯನ್ನು ಅಧಿವಿಚಾರಣಾ ನ್ಯಾಯಾಲಯವು ಮುಂದುವರೆಸತಕ್ಕದ್ದು.